# ಮೂರು ಸುತ್ತಿನ ಮಾತುಕತೆ


ನನ್ನ ಆವಳ ನಡುವೆ
ಮೂರು ಸುತ್ತಿನ ಮಾತುಕತೆ
ನಡೆದಿದೆ

ಒಂದು ಪ್ರೀತಿಯದ್ದು, ಒಂದು ಭೀತಿಯದ್ದು,
ಮತ್ತೊಂದು ಬದುಕಿನದ್ದು

ನನ್ನ ನಿನ್ನ ಪ್ರೀತಿಯದ್ದು ಎಲ್ಲರಿಗೂ
ಗೊತ್ತಿರುವ ಕತೆಯೇ.
ಭೀತಿಯದ್ದು ಮಾತ್ರ
ನಮ್ಮಿಬ್ಬರೊಳಗೇ ಬೆಳೆದಿರುವ ಬೆಟ್ಟ!

ಇನ್ನು ಈ ಬದುಕಿನದ್ದು;
ನನ್ನ ಕೈ ನೀನು
ನಿನ್ನ ಕೈ ನಾನು
ಎಲ್ಲಿಯವರೆಗೆ ಗಟ್ಟಿಯಾಗಿ
ಹಿಡಿದಿರುತ್ತೇವೆಯೋ
ಅಲ್ಲಿಯವರೆಗೆ...

● **ನಾಗರಾಜ್ ಕಾಂಬಳೆ**



ವಾಗೀಶ ಹೆಗಡೆ